# ಶ್ರೀನಿವಾಸ ನೀನೇ ಪಾಲಿಸೋ ಶ್ರಿತಜನ ಪಾಲ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 93.
2. **Ref.:** Samagra Dasa Sahity, Samputa 3.1 published by Kannada & Culture Dept, Govt of Karnataka, Bengaluru, page No. 289.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 427.
4. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 536.
5. **Note:** Lyrics in Ref. 1 and Ref. 2 are matching. In Ref. 3, there are few differences which are marked in yellow highlights.

ರಾಗ ಆನಂದ ಭೈರವಿ ಆದಿ ತಾಳ

ಶ್ರೀನಿವಾಸ ನೀನೇ ಪಾಲಿಸೋ ಶ್ರಿತ ಜನ ಪಾಲ
ಗಾನಲೋಲ ಶ್ರೀ ಮುಕುಂದನೇ ‖ ಪ ‖

ಧ್ಯಾನ ಮಾಳ್ಪ ಸಜ್ಜನರ ಮಾನದಿಂ (ಪರಿಪಾಲಿಪ) (ಪರಿಪಾಲಿಸುವ)
ವೇಣುಗೋಪಾಲ ಗೋವಿಂದ ವೇದವೇದ್ಯ ನಿತ್ಯಾನಂದ ‖ ಅಪ ‖

ಎಂದಿಗೆ ನಿನ್ನ ಪಾದಾಬ್ಜವ ಪೊಂದುವ ಸುಖ
ಎಂದಿಗೆ ಲಭ್ಯವೋ ಮಾಧವ
ಅಂಧಕಾರಣ್ಯದಲ್ಲಿ (ನೊಂದು ತತ್ತಳಿಸುತಿಹ) (ನಿಂದು ತತ್ತರಿಸುತಿಹೆನೊ)
(ಅಂದದಿಂದ ಈ ಭಾವದಿ ನಿಂದು ನೊಂದೆನೊ ಮುಕುಂದ) ‖ 1 ‖
(ಅಂದದಿಂ ಭವಾಬ್ಧಿಯೊಳು ನಿಂದು ನೊಂದೆನೊ ಗೋವಿಂದ)

ಎಷ್ಟು ದಿನ ಕಷ್ಟಪಡುವುದೊ ಯಶೋದೆ ಕಂದ
ದೃಷ್ಟಿಯಿಂದ ನೋಡಲಾಗದೆ
(ಮುಟ್ಟಿ ನಿನ್ನ ಭಜಿಸುವನಲ್ಲ ಕೆಟ್ಟ ನರಜನ್ಮದವನು
ದುಷ್ಟ ಕಾರ್ಯ ಮಾಡಿದರು ಇಷ್ಟನಾಗಿ ಕೈಯ ಪಿಡಿದು) ‖ 2 ‖
(ಮುಟ್ಟಿ ನಿನ್ನ ಭಜಿಸಲಾರೆ ಕೆಟ್ಟ ನರಜನ್ಮದವ
ದುಷ್ಟ ಕಾರ್ಯ ಮಾಡಿದಾಗ್ಯು ಇಷ್ಟನಾಗಿ ಕೈಯ ಪಿಡಿಯೊ)

ಅನುದಿನ ಅನೇಕ ರೋಗಂಗಳ ಅನುಭವಿಸಿದೆನೊ

| | |
|---|---|
| (ಘನ ಮಹಿಮ ನೀನೆ ಬಲ್ಲೆಯಾ) | (ಘನ ಮಹಿಮನೆ ಕೇಳಯ್ಯ) |
| ತನುವಿನಲ್ಲಿ ಬಲವಿಲ್ಲ ನೆನೆದ (ಮಾತ್ರ ಸಲಹುವ) | (ಮಾತ್ರದಿ ಸಲಹೊ ಎನ್ನ) |
| ಹನುಮದೀಶ ಪುರಂದರ (ವಿಠ್ಠಲ ನೀ ಎನಗೆ ಒಲಿದು) ‖ 3 ‖ | (ವಿಠಲನೇ ಕೈಯ ಪಿಡಿದು) |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮಾನದಿಂ** – ಆದರದಿಂದ, ತನ್ನವರೆಂಬ ಅಭಿಮಾನದಿಂದ.

**ಇಷ್ಟನಾಗಿ** – ಪರಮಾಪ್ತನೆನಿಸಿದ ಬಿಂಬರೂಪೀ ಪರಮಾತ್ಮ.

**ಅಂಧಕಾರಣ್ಯದಲ್ಲಿ** – ಸಂಸಾರವೆಂಬ ಕತ್ತಲೆಯ ಕಾಡಿನಲ್ಲಿ.

**ಹನುಮದೀಶ** – ಮುಖ್ಯಪ್ರಾಣನಿಗೆ ಅಂತರ್ಯಾಮಿಯಾದ.

**ವೇದವೇದ್ಯ** – ನಿಗಮಗೋಚರ

**Classification:** Keerthane
**Ankita:** purandara vittala
**Location:** Tirupati
**Category:** Srinivasa Stuti, Vishnu Stuti, Jeevanoddhara, pooja tatva.
**Sub-Category:** Vishnu, srinivasa, hanuma, mukunda, venugopala, koosu, Krishna, Madhava, sukha, kaadu, Dhyana, nara, janma, bhajane, roga, anubhava, deha,
**Pravachana:** NA
**Explanation:** NA